


# ಫೇಕ್‌ನ್ಯೂಸ್ ಕಿಡಿ; ಕೇಡಿಗೆ ಮುನ್ನುಡಿ

ಮಗುವನ್ನು ಕೊಂದು, ಅದರ ರಕ್ತವನ್ನು ತಮ್ಮ ಪೂಜಾಕಾರ್ಯದಲ್ಲಿ ಉಪಯೋಗಿಸಿದರು ಎಂದು ಕ್ರಿಶ್ಚಿಯನ್ನರು ಸುದ್ದಿಕಟ್ಟಿದರು. ಈ ಸುಳ್ಳಿನ ಕಾರಣ ಆ ನಗರದಲ್ಲಿದ್ದ ಎಲ್ಲ ಯಹೂದಿಗಳನ್ನು ಬಂಧಿಸಿ, 15 ಜನರನ್ನು ಜೀವಂತ ಸುಡಲಾಯ್ತು. ಯುರೋಪಿನ ಇತರೆ ದೇಶಗಳೂ ಯಹೂದಿಗಳನ್ನು ಕೊಂದರು. ಯಹೂದಿಗಳನ್ನು ದ್ವೇಷಿಸಲು (**Anti–Semitism**) ಇಂದಿಗೂ ಈ ಸುಳ್ಳುಸುದ್ದಿಯೇ ಕಾರಣವಂತೆ.

ಜರ್ಮನ್ನರ ಸಂಪೂರ್ಣ ಹಿಡಿತದಲ್ಲಿದ್ದ ಪತ್ರಿಕೆಗಳು ಯಹೂದಿಗಳು ಯುದ್ಧದಲ್ಲಿ ಸಿಕ್ಕ ಹೆಣಗಳನ್ನು ಕಾರ್ಖಾನೆಗಳಲ್ಲಿ ಬೇಯಿಸಿ ಅದರಿಂದ ಮೇಣ, ಸಾಬೂನು ಮತ್ತು ನೈಟ್ರೊ ಗ್ಲಿಸರಿನ್ ತಯಾರಿಸಲು ಉಪಯೋಗಿಸುತ್ತಾರೆ ಎಂದು ಬರೆಯಿತು. ಇಂತಹ ಪತ್ರಿಕೋದ್ಯಮದಿಂದ ಹಲವರು ವಿನಾಕಾರಣ ಜೀವಂತ ದಹನಕ್ಕೊಳಗಾದರು. ಯುದ್ಧಗಳೇ ನಡೆದವು. ಯುದ್ಧದ ಸಮಯದಲ್ಲಿ ಕೂಡ ಜನರ ಭಾವನೆಗಳನ್ನು ತಮ್ಮಿಷ್ಟಕ್ಕೆ ತಿರುಗಿಸಿಕೊಳ್ಳಲು ಪತ್ರಿಕೋದ್ಯಮವನ್ನು ಬಳಸಿಕೊಳ್ಳಲಾಯ್ತು. ವಿವಿಧ ಸಂಸ್ಕೃತಿ ಮತ್ತು ಧಾರ್ಮಿಕ ಮತ್ತು ನಂಬಿಕೆಗಳಿರುವ ಭ್ರಷ್ಟ ದೇಶಗಳಲ್ಲಿ ಈ ಪಿಡುಗು ವ್ಯಾಪಕವಾಗಿ ಹಬ್ಬಿರುವುದನ್ನು ಕಾಣಬಹುದು. ಇದರಿಂದ ಅವ್ಯಾಹತವಾಗಿ ನೈತಿಕ ಅಧಃಪತನ, ಗುಂಪು ಗೊಂದಲ, ಕೊಲೆ, ಅತ್ಯಾಚಾರಗಳು, ನಿರಪರಾಧಿಗಳು ಶಿಕ್ಷೆ ಪಡೆಯುವಂತಾಗುವುದು, ಯುದ್ಧಕ್ಕೆ ಕಾರಣವಾಗುವುದು, ಜನರು ಆತ್ಮಹತ್ಯೆ ಮಾಡಿಕೊಳ್ಳುವಂತಾಗುವುದು – ಇವೆಲ್ಲವೂ ಇತಿಹಾಸದುದ್ದಕ್ಕೂ ನಡೆದಿವೆ.

3. ಕಿಡಿಗೇಡಿತನ ಅಥವಾ ಬೇಜವಾಬ್ದಾರಿ ಬರಹಗಳು.

ಕೆಲವರು ಮಾಧ್ಯಮಗಳಲ್ಲಿ ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಭಿನ್ನ ಕಥೆಗಳನ್ನು ಹರಿಯಬಿಟ್ಟು, ಅದರಿಂದ ಏನಾಗುತ್ತದೆ ಎನ್ನುವ ಕುತೂಹಲ ತೋರಬಹುದು. ಇಂಥವರು ತಮ್ಮ ಸುದ್ದಿಗಳಲ್ಲಿ ಓದುಗರು ನಂಬುವಂತೆ ಅಂಕಿ ಅಂಶಗಳನ್ನು ಹೊಸೆದು ಬರೆಯಬಹುದು. ತಮ್ಮ ಹೆಸರು ಮತ್ತು ಗುರುತನ್ನು ಗೌಪ್ಯವಾಗಿಡಬಹುದು.

## ಸುಳ್ಳುಸುದ್ದಿಗಳು ಶುರುವಾದ್ದು ಯಾವಾಗ?

ಸುಳ್ಳುಸುದ್ದಿಗೆ ಚರಿತ್ರೆಯಲ್ಲಿಯೂ ನೂರಾರು ಉದಾಹರಣೆಗಳಿವೆ. ಕ್ರಿಸ್ತಪೂರ್ವ ಮೊದಲ ಶತಮಾನದಲ್ಲಿ ಈಜಿಪ್ಟಿನ ಯುದ್ಧದಲ್ಲಿ 'ಮಾರ್ಕ್ ಆಂಟೊನಿ' ಎಂಬ ರಾಜಕಾರಣಿ ಮತ್ತು ಸೇನಾನಿಯ ಬಗ್ಗೆ ಎದುರಾಳಿ ಆಕ್ಟೇವಿಯನ್ ಸುಳ್ಳುಸುದ್ದಿಗಳ ಅಪಪ್ರಚಾರ ಮಾಡಿ ಆತನ ಜನಪ್ರಿಯತೆಯನ್ನು ಕಡಿಮೆ ಮಾಡುತ್ತಾನೆ. ಮಾರ್ಕ್ ಆಂಟನಿಯ ಪ್ರೇಯಸಿ ರಾಣಿ ಕ್ಲಿಯೋಪಾತ್ರ ಆತ್ಮಹತ್ಯೆ ಮಾಡಿಕೊಂಡು ಸತ್ತಳು ಎನ್ನುವ ಸುಳ್ಳುಸುದ್ದಿಯನ್ನು ಹರಡುತ್ತಾನೆ. ಈ ಸುಳ್ಳುಸುದ್ದಿಯನ್ನು ನಂಬಿದ ಮಾರ್ಕ್ ಆಂಟನಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಾನೆ. ಈ ವಿಚಾರ ತಿಳಿದ ನಂತರ ಹತಾಶಳಾದ ಕ್ಲಿಯೋಪಾತ್ರ ಇಂತಹ ಕಟುಕ ಆಕ್ಟೇವಿಯನ್‌ನಿಂದ ಪಾರಾಗಲು ತಾನು ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

19ನೇ ಶತಮಾನದ ಅಮೆರಿಕ ಮತ್ತು ಸ್ಪೇನಿನ ಯುದ್ಧಕ್ಕೆ ಜೋಸೆಫ್ ಪುಲಿಟ್ಜರ್ ಮತ್ತಿತರ ಹಳದಿ ಪತ್ರಿಕೋದ್ಯಮದವರು ಹರಡಿದ ಸುಳ್ಳುಸುದ್ದಿಗಳೇ ಕಾರಣವಾಗುತ್ತವೆ. 1933ರಲ್ಲಿ ಜರ್ಮನಿ ಹಿಟ್ಲರನ ಆಡಳಿತದಲ್ಲಿದ್ದಾಗ ಸುಳ್ಳುಸುದ್ದಿಗಳನ್ನು ಹರಡಲೆಂದೇ ಜೋಸೆಫ್ ಗೋಬೆಲ್ ಎನ್ನುವ ವಾರ್ತಾ ಸಚಿವನನ್ನು ನೇಮಿಸಿಕೊಂಡಿದ್ದನಂತೆ. ಹಿಟ್ಲರಿನ ಬಗ್ಗೆ ಒಳ್ಳೆಯ ಮತ್ತು ಯಹೂದಿಗಳ ಬಗ್ಗೆ ಕೆಟ್ಟ ಅಭಿಪ್ರಾಯ ಬರುವಂತೆ ಬರೆಸಿದ ಆತ ತನ್ನ ದೇಶದ ಬಹುತೇಕ ಜನರಲ್ಲಿ ಹಲವು ನಂಬಿಕೆಯನ್ನು ಹುಟ್ಟುಹಾಕಿ ಹಳದಿ ಪತ್ರಿಕೋದ್ಯಮದ ಮೂಲಕ ಅವರ ಚಿಂತನೆಯನ್ನು ಸಂಪೂರ್ಣವಾಗಿ ಮಸುಕುಗೊಳಿಸಿಬಿಟ್ಟಿದ್ದ.